Regd No B G 155 24-1-1970

SATYAVADI Daily, MYSORE 4 53 rd Year of Publication

Golden Jubilee Celebrated Paper

ಸತ್ಯವಾದಿ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಚಂಡೀಘರ್ ವಿಷಯದಲ್ಲಿ ನಾಯಕರುಗಳೊಡನೆ ಪರಾಲೋಚನೆ

ತಲವಾಡಿ ಫಿರ್ಕಾ ವಿಷಯವಲ್ಲಿ

ಮದರಾಸು ಮುಖ್ಯಮಂತ್ರಿಯರ ಎಚ್ಚರಿಕೆ

ಮದರಾಸು— ತಮಿಳುನಾಡುವಿನಲ್ಲಿ ಇತರ ರಾಜ್ಯಗಳವರ್ಯಾರಾದೂ ಚಳವಳಿ ಹೂಡಿದರೆ ಅದನ್ನು ಪೂರ್ಣ ವಿರೋಧಿಸಲಾಗುವುದೆಂದು ಮುಖ್ಯ ಮಂತ್ರಿ ಕರುಣಾನಿಧಿಯವರು ಶಾಸನ ಸಭೆಯಲ್ಲಿ ಹೇಳಿದರು – ತಲವಾಡಿ ಫಿರ್ಕಾ ಸಂಬಂಧದಲ್ಲಿ ಮೈಸೂರಿನವರ ಯೋಜನೆ ಕುರಿತು ಹೇಳಲಾಗಿದೆ – ಈ ರಾಜ್ಯದಲ್ಲಿ ಯಾವ ಸರಕಾರವೂ ಕಾರ್ಯ ನಡೆಸುತ್ತಿಲ್ಲವೆಂದು ಯಾರೂ ತಿಳಿಯಬಾರದೆಂದೂ ಹೇಳಿದರು.

○

ಅಜ್ಯಾರವರು ಜ್ಯೋತಿಯವರಿಗೆ ಕೊಟ್ಟಿರುವ ತಿಳುವಳಿಗೆ

ಕಲ್ಕತ್ತಾ — ತನಗೆ ಸಹಕಾರ ನೀಡಬೇಕು, ತಪ್ಪಿದರೆ ಮುಂತ್ರಿ ಪದವಿಗೆ ರಾಜೀನಾಮೆ ಕೊಡಬೇಕು, ಎಂದು ಪಶ್ಚಿಮ ಬಂಗಾಳಾ ಮುಖ್ಯ ಮಂತ್ರಿ ಅಜಾಯ್ ಮುಖರ್ಜಿಯವರು ಉಪ ಮುಖ್ಯಮಂತ್ರಿ ಜ್ಯೋತಿ ಬಾಸುರಿಗೆ ತಿಳಿಸಿರುವರು.

○

ಕೇರಳದಲ್ಲಿ ಮಾಶಕ್ಸಿಸ್ಟರ ಹಾವಳಿ

ತ್ರಿವೇಂಡ್ರಂ— ಕುತಪಾಬವಿನಿಂದ ಬರುತ್ತಿದ್ದ ಬಸ್ಸನ್ನು ಕನ್ನಾನೂರಿಗೆ 18 ಮೈಲಿ ದೂರದಲ್ಲಿ ಶಿಲ್ಪಿ ಹಾಕಿದ್ದನ್ನು ಕೇಳಿದ ಡ್ರೈವರು ನಿಲ್ಲಿಸಿದಾಗ 50 ಮಂದಿ ಮಾರಕ್ಸಿಸ್ಟರು ಸುತ್ತುಗಟ್ಟಿ ಪೆಟ್ರೋಲ್ ಹುಯ್ದು ಸುಟ್ಟರು – 3 ಮಂದಿ ಜೀವಸಹಿತ ಸುಟ್ಟುಹೋದರು – ಸುಮಾರು 50 ಮಂದಿ ಹಾಗೂ ಹೀಗೂ ಬಸ್ಸಿನಿಂದ ಇಳಿದವರಲ್ಲಿ ಸುಟ್ಟಗಾಯ ಹೊಂದ್ದರು ; ತೀವ್ರ ಪರಿಸ್ಥಿತಿಯಲ್ಲಿದ್ದವರು ಆಸ್ಪತ್ರೆಗೆ ಹಾಕಲ್ಪಟ್ಟರು – ಈ ರಾಕ್ಷಸೀ ಕೃತ್ಯವನ್ನು ಪ್ರತಿಭಟಿಸಿ ಮತ್ತನೂರು ಪಟ್ಟಣದಲ್ಲಿ ಹರತಾಳ ಆಚರಿಸಲಾಯಿತು

ಪೋಲೀಸರ ಮೇಲೆ ಆಪಾದನೆ

ಲಂಡನ್— ತನ್ನಲ್ಲಿದ್ದ 5500 ಸ್ಟರ್ಲಿಂಗುಗಳನ್ನು ಮೂರು ಮಂದಿ ಸಾಮಾನ್ಯ ಉಡುಪಿನ ಪೋಲೀರು ಅಪಹರಿಸಿರುವರೆಂದು ವುಲ್ವರ್‌ಹ್ಯಾಂಪ್ಟನ್ನಿನ ಭಾರತೀಯ ವ್ಯಾಪಾರಿಗ ಶ್ರೀ ಟೇಲ್ ಸಿಂಗ್ ಮಿಟು ಮಾಡಿರುವ ಆಪಾದನೆಯನ್ನು ಸ್ಟಾಫ್ಟ್ಲೈಡ್ ಯಾರ್ಡ್ ಪತ್ತೇದಾರಿಗಳು ತನಿಖೆ ನಡೆಸುತ್ತಿದ್ದಾರೆ.

★

ಬಹಿಷ್ಕಾರ

ಹೈದರಾಬಾದು— ಬಿಳಿ ಮತ್ತು ಕೆಂಪು ಗೋಧಿಯ ಜೊತೆಗೆ ಕೆಳಮಟ್ಟದ ಕಪ್ಪು ಗೋಧಿಯನ್ನು ತೆಗೆದುಕೊಳ್ಳಬೇಕೆಂದು ಪರತ್ತು ಹಾಕಿರುವುದರಿಂದ ಫುಡ್ ಕಾರ್ಪೊರೇಷನ್ನಿಂದ ಗೋಧಿ ದಾಸ್ತಾನು ಪಡೆಯುವುದನ್ನು ಆಂಧ್ರ ಪ್ರದೇಶ ಗೋಧಿ ಹಿಟ್ಟಿನ ಗಿರಣಿಗಳು ಬಹಿಷ್ಕರಿಸಿವೆ.

★

ಹೊಲಗಳ ಅಭಿವೃದ್ಧಿ

ನವದೆಹಲಿ — ಸುಮಾರು 190 ಮಿಲಿಯ ಎಕ್ರೆ ಹೊಲಗಳನ್ನು 4 ನೇ ಯೋಜನೆಯರು ರೂ 20 ಕೋಟಿ ವೆಚ್ಚದಿಂದ ಅಭಿವೃದ್ಧಿಗೊಳಿಸಲು ಸರಕಾರ ನಿರ್ಧರಿಸಿರುವುದಾಗಿ ತಿಳಿಸಲಾಗಿದೆ.

○

ಸರ್ಕಾರದ ಮೇಲಿನ ಡಿಕ್ರಿ

ಕಾರವಾರ— ಗೋಡ್ಸೆ ಕೇಸಿನಾದ ವಿ ಎಂ ಶ್ರಭುರವರಿಗೆ ಸರಕಾರದಿಂದ ಬರಬೇಕಾಗಿದ್ದ ಹಣಕ್ಕೆ ಆಗಿದ್ದ ಡಿಕ್ರಿ ರೂ. 503.95 ಕ್ಕೆ ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಚರಸ್ವತ್ತುಗಳನ್ನು ಮಾರಲು ಕಾರವಾರ ಸಿವಿಲ್ ಜಡ್ಜರು ಆಜ್ಞೆ ಮಾಡಿದ್ದಾರೆ.

★

ಚಂಡೀಘರ್ ವಿಷಯ

ನವದೆಹಲಿ— ಚಂಡೀಘರದ ವಿಷಯವನ್ನು ಪರ್ಯಾಲೋಚಿಸಲು ಭಾನುವಾರ ವಿವಿಧ ಪಕ್ಷಗಳ ನಾಯಕರ ಸಭೆಯನ್ನು ಪ್ರಧಾನಿ ಇಂದಿರಾರು ಏರ್ಪಡಿಸಿರುವರು.

★

ಇನ್ನೂ ಹುಟ್ಟದಿರುವ ಭವಿಷ್ಯನುಡಿಯುವ ಮಗು

ಕೌಲಾಲಾಂಪುರ— ಇನ್ನೂ ಹುಟ್ಟಿಲ್ಲದ ತನ್ನ ಮಗುವು ಪ್ರಶ್ನೆಗೆ ಉತ್ತರ ಕೊಡುತ್ತಿರುವುದೆಂದು ಹೇಳುತ್ತಿರುವ ಒಬ್ಬ ಇಂಡೋನೇಷಿಯ ಮಹಿಳೆಯನ್ನು ಮಲೇಷಿಯಾದ ಮುಖ್ಯ ಮಂತ್ರಿ ಟುಂಕು ರೆಹಮಾನರು ಕಂಡ, ಆ ಮಗುವಿನ ಬಗ್ಗೆ ವರದಿಯಾಗಿದ್ದ ಆಕ್ತಿಯ ಪ್ರದರ್ಶನ ನೋಡಿ 200 ಮಿಲಿಯ ಮಲೇಷಿಯಾ ಡಾಲರು (27 ಸ್ಟರ್ಲಿಂಗ್ ಬಹುಮಾನಿಸಿದರು. ಸುಮಾತ್ರಾದ ಅಬೆವಿನ ತಾಜುಕ್ ಜಹಾರ್ ಪೋನಾ ಎಂಬ ಈ ಮಹಿಳೆಯು ಮಕ್ಕಾಕ್ಕೆ ಯಾತ್ರಾರ್ಥವಾಗಿ ಹೋಗುವ ಮುದ್ದ ಏಷ್ಯಾ ಮತ್ತು ಮಧ್ಯಪ್ರಾಚ್ಯ ದೇಶಗಳಲ್ಲಿ ಪ್ರವಾಸ ಮಾಡುತ್ತಿರುವರು – 11 ತಿಂಗಳ ಗರ್ಭಿಣಿಯಾದ ಈಕೆ ತನ್ನ ಮಗ 2 ವರ್ಷಗಳ ನಂತರ ಮುಕ್ಕಾದಲ್ಲಿ ಹುಟ್ಟುವುದಾಗಿ ಹೇಳುತ್ತಿದ್ದಾನೆಂದು ತಿಳಿಸಿದರು.

★

ಕೋಟ್ಯಾಧೀಶ್ವರನ ಆತ್ಮಹತ್ಯೆ

ಡಾಲಾಸ್— ಕೋಟ್ಯಾಧೀಶ್ವರ ಸಿಗ್ರೇವ್ಸ್ ಇಲ್ಲಿಯ ಹೋಟಲಿನ ಅತಿ ಎತ್ತರದ ಕೊಠಡಿಯಿಂದ ಕೆಳಕ್ಕೆ ಬಿದ್ದು ಸತ್ತನು.

○

ನಿಜಲಿಂಗಪ್ಪನವರ ಕೈವಾಡ

ಬೆಂಗಳೂರು— ರಾಜ್ಯದ ಆಡಳಿತದಲ್ಲಿ ಶ್ರೀ ನಿಜಲಿಂಗಪ್ಪನವರ ಕೈವಾಡ ನಡೆಯುತ್ತಿರುವದೆಂದು ಶಾಸನಸಭೆಯಲ್ಲಿ ಆರೋಪಿಸಲಾಯಿತು.

ರಾಜಸ್ಥಾನ ಶಾಸನಸಭೆಯಲ್ಲಿ

ಜಯಪುರ— ಶಾಸನ ಸಭೆಯಲ್ಲಿ ಚುರು ಗೋಳೀಬಾರು ಬಗ್ಗೆ ಗೃಹಮಂತ್ರಿಯರು ಕೊಟ್ಟ ಉತ್ತರ ತೃಪ್ತಿಕರವಾಗಿಲ್ಲವೆಂದು ಸದಸ್ಯ ಶ್ರೀ ರಾಮಚಂದ್ರ ಆರ್ಯರು ಗೃಹಮಂತ್ರಿ ಶ್ರೀ ವ್ಯಾಸರ ಕಡೆ ಜೋಡನ್ನು ಜಳುಪಿಸಿದರು – ಇವರನ್ನು ಈ ಅಧಿವೇಶನ ಪೂರ್ತಾ ಹೊರಗೆ ಹಾಕಬೇಕೆಂದು ಮುಖ್ಯಮಂತ್ರಿಗಳು ಸೂಚನೆ ತಂದಾಗ ಶ್ರೀ ಆರ್ಯರು ಕ್ಷಮಾಪಣೆ ಬೇಡಲು, ಅಲ್ಲಿಗೆ ಇದು ಶಾಂತವಾಯಿತು.

★

ನಿರಾಕರಣೆ

ಬೆಂಗಳೂರು— ತಮ್ಮ ಪಾರ್ಟಿ ಬಿಟ್ಟವರ ವಿಷಯದಲ್ಲಿ ಕಣ್ಣಿಟ್ಟಿರಬೇಕೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಪೋಲೀಸು ಮುಖ್ಯಾಧಿಕಾರಿಗಳಿಗೆ ತಿಳಿಸಿರುವರೆಂದು ಶಾಸನಸಭೆಯಲ್ಲಿ ಮಾಡಲಾದ ಆಪಾದನೆಯನ್ನು ಮುಖ್ಯಮಂತ್ರಿಗಳು ನಿರಾಕರಿಸಿದರು.

○

ಹೊಸ ಪೌರಸಭಾಧ್ಯಕ್ಷರು

ಮೈಸೂರು— ಹೊಸದಾಗಿ ಪುರಸಭಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಶ್ರೀ ಬಿ. ಕೆ. ಪುಟ್ಟಯ್ಯನವರು, ಮತ್ತೀರ್ವರು, ತಾವು ಕಾಂಗ್ರೆಸ್ಸಿಗೆ ಸೇರಿದ್ದೇವೆ ಅಥವಾ ಸೇರಲಿದ್ದೇವೆ ಎಂದು ಹೇಳುವುದು ಶುದ್ಧ ಸುಳ್ಳೆಂದೂ, ತಾವು ಪಿ ಎಸ್ ಪಿ ಯಲ್ಲೇ ಉಳಿಯುತ್ತೇವೆಂದೂ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

★

ಚಳಿಗೆ ಆಹುತಿ

ಕಾಥ್ಮಂಡು— ವಿಪರೀತ ಛಳಿಯಿಂದ 4 ಜನ ಸತ್ತರು.

★

31 ಮಂದಿ ದಸ್ತಗಿರಿ

ಬೆಂಗಳೂರು— ಚಿಂತಾಮಣಿಯಲ್ಲಿ ಹೋಟಲುಗಳಲ್ಲಿ ಬೆಲೆ ತಗ್ಗಿಸಬೇಕೆಂಬ ಚಳವಳಿ ಸಂಬಂಧವಾಗಿ 31 ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು.

ಅಪಾರ ಚಿನ್ನ ವಶ

ಬೊಂಬಾಯಿ— ರೂ. 28 ಲಕ್ಷ ಮೌಲ್ಯದ 14000 ತೊಲ ಚಿನ್ನವನ್ನು ಎಸ್ ನವರು ಬೇಸಿಂ ಕೊರಕಲಿನಲ್ಲಿ ವಶಪಡಿಸಿಕೊಂಡರು.

ರೂ 25 ಕೋಟಿ ಪರಿಹಾರ

ನವದೆಹಲಿ— ಚಂಡೀಶ್ವರನನ್ನು ಕೇಳುವುದನ್ನು ಹರಯಾಣ ಬಿಟ್ಟು, ಹೊಸದಾಗಿ ರಾಜಧಾನಿ ಕಟ್ಟಿಕೊಳ್ಳಲು ರೂ 25 ಕೋಟಿ ಪರಿಹಾರ ಕೊಡುವ ಯೋಜನೆ ಇರುವದೆಂದು ಹೇಳಲಾಗಿದೆ.

ದತ್ತು ತೆಗೆದುಕೊಳ್ಳಲು ಹೈ ಕೋರ್ಟು ಒಪ್ಪಿತ

ಮದರಾಸು— ಸ್ವಾಕ್‌ಹ್ಯಾಮಿನ ಅನ್ನಿ ಬ್ರಿಟಾ ಆಟ್ವಾ ಎಂಬ ಸ್ವೀಡಿಷ್ ಮಹಿಳೆಯು, ರಿಸ್ಕ್ಯಾಶ್ ಹೋಂನಲ್ಲಿ ತನ್ನ ತಾಯಿ ಜೊತೆ ಇರುವ ನ್ಯಾಯಬಾಹಿರವಾಗಿ ಹುಟ್ಟಿದ ಮಗುವನ್ನು ದತ್ತು ಮಾಡಿಕೊಳ್ಳಲು ಹೈ ಕೋರ್ಟು ಅನುಮತಿ ಕೊಟ್ಟಿದೆ.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇಷ್ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI
SUDHA

A Superb Tonic

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್ ಅಮೋಘ 4 ನೇ ವಾರ
ಅಮೋಘ ಪ್ರಾರಂಭ
ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್
[ದಿನ 3 ಪ್ರದರ್ಶನಗಳು]

ಆಪೆರಾ— 23-1-70 ರಿಂದ
.... ಅತ್ಯಮೋಘ ಕನ್ನಡ ಚಿತ್ರ ....

ಭಲೇ ಕಿಲಾಡಿ

ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್
ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ
ದಿಗ್ದರ್ಶನ : ಎಸ್ ನಾಗರಾಜ್
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 6